# ವೀರಶೈವ ಪುಣ್ಯಕ್ಷೇತ್ರಗಳು

ಪ್ರೊ. ಮಲೆಯೂರು ಗುರುಸ್ವಾಮಿ



ಕೂಡಲಸಂಗಮೇಶ್ವರ ದೇವಸ್ಥಾನ, ಕೂಡಲಸಂಗಮ

**ಕನ್ನಡ ನೆಲದಲ್ಲಿಯೇ ಹುಟ್ಟಿಬೆಳೆದ ವೀರಶೈವ ಸಂಪ್ರದಾಯದ ಪುಣ್ಯಕ್ಷೇತ್ರಗಳ ಆಡುಂಬೊಲವು ಕರ್ನಾಟಕವೇ ಆಗಿರುವುದು ಆಶ್ಚರ್ಯಕರವೇನಲ್ಲ. ಕನ್ನಡನಾಡಿನಲ್ಲೆಲ್ಲ ಇರುವ ಅಂಥ ಪವಿತ್ರ ತಾಣಗಳ ಮಹತ್ವವನ್ನು ಪರಿಚಯಿಸಿಕೊಟ್ಟಿರುವ ಲೇಖಕರು ಮೈಸೂರಿನ ಸುತ್ತೂರು ಶ್ರೀಮಠದ ಜೆ.ಎಸ್.ಎಸ್. ಸಂಸ್ಥೆಯ ನಿವೃತ್ತ ಕನ್ನಡ ಪ್ರಾಧ್ಯಾಪಕರು. ಖ್ಯಾತ ಸಾಹಿತಿಗಳಾದ ಶ್ರೀಯುತರು ವೀರಶೈವ ಸಾಹಿತ್ಯದಲ್ಲಿ ಸಿದ್ಧಹಸ್ತರು.**

### ತೀರ್ಥಯಾತ್ರೆಯ ಮಹತ್ವ

ಭಾರತೀಯರಿಗೆ ತೀರ್ಥಕ್ಷೇತ್ರಯಾತ್ರೆ ಪರಮಪವಿತ್ರವಾದುದು. ತೀರ್ಥವೆಂದರೆ ಪವಿತ್ರ ಜಲ. ಕ್ಷೇತ್ರವೆಂದರೆ ಭಗವಂತ ಅಥವಾ ಭಗವತ್‌ಸ್ವರೂಪಿಗಳ ಆವಾಸಸ್ಥಾನ. ಪ್ರಾಚೀನ ಕಾಲದ ಋಷಿಮುನಿಗಳು ಭಗವಂತನ ಸಾಕ್ಷಾತ್ಕಾರಕ್ಕಾಗಿ ಗಿರಿಗಹ್ವರಗಳಲ್ಲಿ ಅನುಷ್ಠಾನ ಮಾಡುತ್ತಾ, ಕಾಡುಮೇಡುಗಳಲ್ಲಿ ಅಲೆದಾಡುತ್ತಾ, ಪಂಚಭೂತಗಳು ಸಮನ್ವಯಗೊಂಡು ಉಂಟಾಗಿರುವ ಜೀವವೈವಿಧ್ಯದ ವಿಸ್ಮಯಗಳನ್ನು ಕಾಣುತ್ತಾ, ಅಂತಹ ವಿಸ್ಮಯಕ್ಕೆ ಕಾರಣವಾದ ಮೂಲಶಕ್ತಿಯ ಅನ್ವೇಷಣೆಯಲ್ಲಿ ತಮ್ಮ ನಿಡುಬಾಳನ್ನು ಸವೆಸಿ ಕೊನೆಯಲ್ಲಿ ನದಿಗಳ ದಡಗಳಲ್ಲಿ, ಗಿರಿಗಳ ಎತ್ತರದಲ್ಲಿ, ನಿಸರ್ಗಸಂಪತ್ತು ವೈವಿಧ್ಯಮಯವಾಗಿರುವ ವಿಶೇಷ ಸ್ಥಳಗಳಲ್ಲಿ ಶಾಶ್ವತವಾಗಿ ನೆಲೆನಿಲ್ಲುತ್ತಿದ್ದರು. ಅಂತಹ ಕಡೆ ಆಶ್ರಮಗಳೂ, ಅವರು ಬಯಲಾದ ನಂತರ ಅವರ ಹೆಸರಿನಲ್ಲಿ ಗುಡಿಗೋಪುರಗಳು ನಿರ್ಮಾಣವಾಗುತ್ತಿದ್ದುವು. ಆ ಮಹಿಮರು ಮೆಟ್ಟಿದ ಧರೆ ಪಾವನ, ಅಂತಹ ಪಾವನಧರೆಯಲ್ಲಿ ಹರಿಯುವ ಜಲವೇ ತೀರ್ಥ ಎನ್ನುವ ಸದ್ಭಾವನೆಯಿಂದ ಆಸ್ತಿಕ ಜನ ಅಂತಹ ಸ್ಥಳಗಳಿಗೆ ಭೇಟಿಕೊಟ್ಟು ಪೂಜಾಕೈಂಕರ್ಯಗಳನ್ನು ನಡೆಸುವುದು ಪುಣ್ಯಪ್ರದವಾದ ಕೆಲಸ ಎಂದು ಭಾವಿಸಿ ಶ್ರದ್ಧಾಭಕ್ತಿಗಳಿಂದ ಅದನ್ನು ನೆರವೇರಿಸುತ್ತಿದ್ದರು. ಭಾರತದಲ್ಲಿ ಆಸೇತುಹಿಮಾಚಲ ಪರ್ಯಂತ ಇಂತಹ ಅನೇಕ ಕ್ಷೇತ್ರಗಳಿದ್ದು ಅಸಂಖ್ಯಾತ ಜನರು ಇವುಗಳಿಗೆ ನಡೆದುಕೊಳ್ಳುವುದನ್ನು ನಾವು ನೋಡುತ್ತೇವೆ. ಅನೇಕ ಧರ್ಮೀಯರಲ್ಲಿ ತಮ್ಮ ಧರ್ಮದ ಸ್ಥಾಪಕಪುರುಷನ ಜನ್ಮಸ್ಥಾನ ಹಾಗೂ ಇಹಲೋಕವನ್ನು ತ್ಯಜಿಸಿದ ಸ್ಥಾನ ಇವೆರಡೂ ಪರಮ ಪವಿತ್ರವೆನ್ನುವ ಭಾವನೆ ಬಹಳ ದಟ್ಟವಾಗಿ ವ್ಯಾಪಿಸಿರುವುದನ್ನು ಕಾಣುತ್ತೇವೆ. ಇಂತಹ ಕ್ಷೇತ್ರಗಳು ಆಸ್ತಿಕ ಜನಗಳ ಪಾಲಿಗೆ ಒಂದು ರೀತಿಯ ಜಾಗೃತಸ್ಥಾನಗಳು, ಶಕ್ತಿಕೇಂದ್ರಗಳು. ಮುಂದೆ ಈ ಕ್ಷೇತ್ರಗಳು ಕೇವಲ ಭಕ್ತಿಯನ್ನು ಸಮರ್ಪಿಸುವುದಕ್ಕಷ್ಟೇ ಸೀಮಿತವಾಗದೆ ಸಾಂಸ್ಕೃತಿಕ ಕೇಂದ್ರಗಳಾಗಿ ಮಾರ್ಪಟ್ಟಿರುವುದು ಸಹ ವಾಸ್ತವ ಸಂಗತಿಯಾಗಿದೆ. ಹಿಂದೂಗಳಿಗೆ ಕಾಶಿ, ರಾಮೇಶ್ವರ, ಹೃಷೀಕೇಶ, ಹರಿದ್ವಾರ, ಪ್ರಯಾಗ, ಗಂಗೋತ್ರಿ, ಯಮುನೋತ್ರಿ – ಇಂತಹ ಅನೇಕ ಸ್ಥಳಗಳು ರಾಷ್ಟ್ರಮಟ್ಟದಲ್ಲಿ ಶ್ರದ್ಧಾಕೇಂದ್ರಗಳಾಗಿವೆ. ಇನ್ನು ಆಯಾ ಪ್ರದೇಶಗಳಲ್ಲಿಯೂ ಅವುಗಳದ್ದೇ ಆದ ಚಾರಿತ್ರಿಕ ಪೌರಾಣಿಕ ಪರಿವೇಷಗಳನ್ನು ಒಳಗೊಂಡ ಕ್ಷೇತ್ರಗಳು ದೇಶದ ಉದ್ದಗಲಕ್ಕೂ ಕಂಡುಬರುತ್ತವೆ. ಕ್ರಿಶ್ಚಿಯನ್ನರು, ಮುಸಲ್ಮಾನರು, ಬೌದ್ಧರು, ಜೈನರು, ಸಿಖ್ಖರು ಇತ್ಯಾದಿ ಎಲ್ಲ ಧರ್ಮೀಯರಿಗೂ ತಮ್ಮದೇ ಆದ ಪವಿತ್ರ ಕ್ಷೇತ್ರಗಳಿವೆ. ಮುಸಲ್ಮಾನ ಧರ್ಮೀಯರು ಜೀವಮಾನದಲ್ಲಿ ಒಮ್ಮೆ ಮೆಕ್ಕಾ ಮದೀನಾಕ್ಕೆ ಹೋಗುವ, ಕ್ರಿಶ್ಚಿಯನ್ನರು ಒಮ್ಮೆಯಾದರೂ ವ್ಯಾಟಿಕನ್‌ಗೆ ಹೋಗುವ ಹೆಬ್ಬಯಕೆಯನ್ನು ಹೊಂದಿರುತ್ತಾರೆ. ಇದು ಕೇವಲ ಪ್ರವಾಸವಾಗುವುದಿಲ್ಲ. ಪ್ರವಾಸಕಾಲದಲ್ಲಿ ಬಯಸುವ ಯಾವುದೇ ರೋಮಾಂಚಕಾರಿಯಾದ ಅನುಭವವನ್ನು ಇಲ್ಲಿ ಯಾರೂ ನಿರೀಕ್ಷಿಸುವುದಿಲ್ಲ. ಆದ್ದರಿಂದಲೇ ಇದು 'ಯಾತ್ರೆ' ಎಂದು

ಕರೆಸಿಕೊಳ್ಳುತ್ತದೆ. ಇಲ್ಲಿ ಬಂದೊದಗುವ ನಿರೀಕ್ಷಿತ ಕಾಯ ಕ್ಲೇಶಗಳೂ ಯಾತ್ರಾರ್ಥಿಗಳಿಗೆ ಸಂತೋಷದಾಯಕವೇ ಆಗಿರುತ್ತವೆ. ಅಷ್ಟರಮಟ್ಟಿಗೆ ಅವರ ಮನಸ್ಥಿತಿ ಏಕಮುಖವಾಗಿದ್ದು, ಸಮರ್ಪಣಾ ಭಾವದಿಂದ ಕೂಡಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಅಂತಹ ಸ್ಥಳಗಳಲ್ಲಿ ಪ್ರಾಣ ಬಿಡುವುದೂ ಪುಣ್ಯದ ವಿಷಯ ಎಂದೇ ಭಾವಿಸುತ್ತಾರೆ. ಉದಾಹರಣೆಗೆ, ನಮ್ಮಲ್ಲಿ, ಕಾಶೀಕ್ಷೇತ್ರದಲ್ಲಿ ಪ್ರಾಣತ್ಯಾಗ ಮಾಡಿದರೆ ಪುಣ್ಯ ಅನ್ನುವುದು ಅನೇಕರ ನಂಬಿಕೆಯಾಗಿದೆ. ಬೇರೆ ಕಡೆ ನಿಧನರಾದರೂ, ಶವವನ್ನು ಅಲ್ಲಿಗೇ ತಂದು ದಹನ ಕ್ರಿಯೆಯನ್ನು ನಡೆಸುವ ಪರಿಪಾಠವಿದೆ. ಇದೇನೇ ಇರಲಿ, ಜಗತ್ತಿನಾದ್ಯಂತ 'ಕ್ಷೇತ್ರ'ಗಳ ಬಗ್ಗೆ ವೈಯಕ್ತಿಕ ನಿಷ್ಠೆಯಿಂದ ಹಿಡಿದು, ಸಾಮೂಹಿಕವಾದ ನಂಬಿಕೆಯ ತನಕ ಅನೇಕ ತೆರನ ಭಾವಕೋಶಗಳು ನಿರ್ಮಾಣಗೊಂಡಿರುವುದಂತೂ ಸತ್ಯ.

ವೀರಶೈವ ಧರ್ಮವು ಹಿಂದೂಧರ್ಮದ ಕಕ್ಷೆಯಲ್ಲಿಯೇ ಬರುವ ಧಾರ್ಮಿಕ ನಡಾವಳಿಗಳನ್ನು ಹೆಚ್ಚಿನ ಅಂಶಗಳಲ್ಲಿ ಅನುಸರಿಸಿದರೂ, ಕೆಲವು ವಿಷಯಗಳಲ್ಲಿ ಸ್ವಲ್ಪ ಭಿನ್ನತೆಯನ್ನೂ ಮೆರೆದಿದೆ. ಈ ಧರ್ಮವು ದೇವಸ್ಥಾನಗಳ ಬಗ್ಗೆ, ದೇವರುಗಳ ಬಗ್ಗೆ, ಮೋಕ್ಷ, ಸ್ವರ್ಗ, ನರಕ, ಫಲ, ಜ್ಯೋತಿಷ್ಯ ಇವುಗಳ ಬಗ್ಗೆ ತನ್ನದೇ ಆದ ಸಿದ್ಧಾಂತವನ್ನು ರೂಪಿಸಿಕೊಂಡಿತು. ಮುಂದಿನ ದಿನಗಳಲ್ಲಿ ಅವುಗಳನ್ನು ಸಂಪೂರ್ಣವಾಗಿ ಅನುಸರಿಸುವಲ್ಲಿ ವಿಫಲವಾಯಿತು ಎನ್ನುವ ಅಂಶವನ್ನು ಒಪ್ಪಿಕೊಂಡರೂ, ಅದರ ಸೈದ್ಧಾಂತಿಕ ನಿಲುವುಗಳು ಮಾತ್ರ ಅಚ್ಚರಿ ಹುಟ್ಟಿಸುವಂಥವು ಎನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಬಸವಪೂರ್ವ ಯುಗದಲ್ಲಿದ್ದ ವೀರಶೈವ 'ಕ್ಷೇತ್ರ' ಕಲ್ಪನೆ ಬಸವೋತ್ತರ ಯುಗದಲ್ಲಿ ಪಲ್ಲಟವಾಯಿತು. ವಿಶ್ವನಾಥನು ಕಾಶಿಯಲ್ಲಿ ಮಾತ್ರ ಇರುವಂಥವನಲ್ಲ, ಶರಣನ ಮನೆಯಂಗಳವೂ ಸಹ ಅವನ ವಾಸಸ್ಥಾನ (ಭಕ್ತನ ಮನೆಯಂಗಳವೇ ವಾರಾಣಸಿ) ಎಂದು ಹೇಳುವುದರ ಮೂಲಕ ಶ್ರೇಷ್ಠ ಶರಣನ ಕರ್ಮಭೂಮಿಯೂ ಸಹ ಒಂದು ಪವಿತ್ರ ಕ್ಷೇತ್ರ ಎನ್ನುವ ಹೊಸ ಪರಿಕಲ್ಪನೆಯನ್ನು ಕೊಟ್ಟುದುದು ಚರಿತ್ರಾರ್ಹವಾದುದಾಗಿದೆ. ಈ ಹಿನ್ನೆಲೆಯಲ್ಲಿ ವೀರಶೈವ ಶರಣರ ಸಾಧನಾಸ್ಥಳಗಳು ಹಾಗೂ ಲಿಂಗೈಕ್ಯರಾದ ಸ್ಥಳಗಳನ್ನು ಮಾತ್ರ ಕ್ಷೇತ್ರಗಳೆಂದು ಪರಿಗಣಿಸಲಾಗುತ್ತದೆ. ಈ ಸ್ಥಳಗಳಲ್ಲಿಯೂ ಆಯಾ ಶರಣರ ಇಷ್ಟದೇವತೆಯ (ವಚನಾಂಕಿತದಲ್ಲಿ ಕಂಡುಬರುವ ಹೆಸರು) ಗುಡಿಗೋಪುರಗಳು ನಿರ್ಮಾಣವಾಗಿರಬಹುದು. ಅವುಗಳಿಗೂ ಭಕ್ತರು ನಡೆದುಕೊಳ್ಳಬಹುದು. ಅಂತಹ ದೇಗುಲಗಳು ಶರಣಸ್ಥಲಗಳಲ್ಲಿ ಅನೇಕ ಕಡೆ ಕಂಡುಬರುತ್ತವೆ. ಆದರೆ ವೀರಶೈವರಿಗೆ ಮುಖ್ಯವಾಗುವುದು ಶರಣರ 'ಗದ್ದುಗೆ' ಮಾತ್ರ. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಅನೇಕ ಪ್ರಸಿದ್ಧ ಶರಣ ಕ್ಷೇತ್ರಗಳಿರುವುದನ್ನು ನಾವು ಗುರ್ತಿಸಬಹುದು. ವಿಜಯನಗರದಲ್ಲಿ ಪ್ರೌಢದೇವರಾಯನ ಮಂತ್ರಿಯಾಗಿದ್ದ ಲಕ್ಕಣ್ಣ ದಂಡೇಶ ತನ್ನ ಶಿವತತ್ವ ಚಿಂತಾಮಣಿಯಲ್ಲಿ **ಶ್ರೀಶೈಲ, ಹಂಪೆ, ಲಕ್ಷ್ಮೇಶ್ವರ, ಗುಮ್ಮಳಾಪುರ, ಕಲ್ಯಾಣ** ಮತ್ತು **ಉಳವಿ** – ಈ ಸ್ಥಳಗಳನ್ನು ವೀರಶೈವ ಕ್ಷೇತ್ರಗಳೆಂದು ಗುರ್ತಿಸುತ್ತಾನೆ. ಈ ಆರು ಸ್ಥಳಗಳನ್ನು ಹೆಸರಿಸುವುದಕ್ಕೆ ಅವನು ಯಾವ ಅಂಶವನ್ನು ಮುಖ್ಯವಾಗಿ ಪರಿಗಣಿಸಿದ್ದಾನೆಯೋ ಎಂದು ತಿಳಿಯದು. ಅಂದಾಕ್ಷಣ ನಾವು ವೀರಶೈವ ಕ್ಷೇತ್ರಗಳನ್ನು ಅಷ್ಟಕ್ಕೆ ಸೀಮಿತಗೊಳಿಸಿಕೊಳ್ಳಬೇಕಾಗಿಲ್ಲ. ಬೇರೆ ಬೇರೆ ಆಯಾಮಗಳ ಹಿನ್ನೆಲೆಯಲ್ಲಿ ಕರ್ನಾಟಕ ಮತ್ತು ಹೊರರಾಜ್ಯಗಳಲ್ಲಿ ನೂರಾರು ಇಂಥ ಶರಣಕ್ಷೇತ್ರಗಳನ್ನು ಗುರ್ತಿಸ ಬಹುದು. ಬೇರೆ ಬೇರೆ ಕಾಲಘಟ್ಟದ ಹಿನ್ನೆಲೆಯಲ್ಲಿ ಇಲ್ಲಿ ಸಾಂಕೇತಿಕವಾಗಿ ಕೆಲವನ್ನು ಮಾತ್ರ ನೋಡಬಹುದು.

## ಉಳವಿ


ಉಳವಿಯ ದೇಗುಲ

**ಶಿಲೆಯೆಲ್ಲವು ಶಿವಲಿಂಗವು**
**ಜಲವೆಲ್ಲವು ಪುಣ್ಯತೀರ್ಥ**
**ತರುಲತೆ ತೃಣದ ಮಲೆಯೆಲ್ಲವು ಬಿಲ್ವದ ವನ**
**ಸಲೆಯುಳುವೆಯ ಕ್ಷೇತ್ರ ಪೇಳಲಶಕ್ಯ**

*– ಸೋದೆ ಸದಾಶಿವರಾಯ*

ಉತ್ತರಕನ್ನಡ ಜಿಲ್ಲೆಯ ಸೂಪಾ ತಾಲ್ಲೂಕಿನಲ್ಲಿರುವ ಶ್ರೀಕ್ಷೇತ್ರ ಉಳವಿ, ದಟ್ಟ ಅರಣ್ಯದಿಂದ ಆವೃತವಾದ ಸ್ಥಳ. ಇದು

ಸೂಪಾದಿಂದ ಮೂವತ್ತು ಮೈಲಿ ದೂರದಲ್ಲಿದೆ. ಈ ಕ್ಷೇತ್ರಕ್ಕೆ ಈ ಹೆಸರು ಬಂದಿರುವುದು ೧೨ ನೇ ಶತಮಾನದ ಅನಂತರ ಎನ್ನುವ ವಾದವಿದೆ. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಈ ಸ್ಥಳಕ್ಕೆ ಬಂದ ಚನ್ನಬಸವಣ್ಣನವರು ಶರಣರನ್ನು ಕುರಿತು, 'ನಾನು ಇಲ್ಲೇ ಉಳಿವೆ' ಎಂದು ತಿಳಿಸಿದಾಗ 'ಉಳವಿ' ಎನ್ನುವ ಹೆಸರು ಉಂಟಾಯಿತಂತೆ.

"ಅಲೆ ಅಲೆಯಂತಿರುವ ಪರ್ವತಶ್ರೇಣಿಗಳನ್ನು ದಾಟುತ್ತ, ದಟ್ಟವಾದ ಹಸಿರು ಭೇದಿಸಿಕೊಂಡು ಮುನ್ನುಗ್ಗಿದ ಶರಣರು ಪ್ರಾಕೃತಿಕ ಸಂಪತ್ತಿನ ಅನರ್ಘ್ಯ ರತ್ನಭಂಡಾರದಂತಿರುವ ಆ ಸ್ಥಳವನ್ನು ಕಂಡರು. ಆ ಕೊಳ್ಳದ ಮಧ್ಯದ ಮಟ್ಟಸವಾದ ಜಾಗದಲ್ಲಿ ನಿಂತ ಚೆನ್ನಬಸವಣ್ಣನಿಗೆ ಸುತ್ತಲೂ ತಲೆಯೆತ್ತಿ ನಿಂತ ಪರ್ವತ ಶಿಖರಗಳು, ಧರ್ಮದ ಬೆಂಗಾವಲಿಗೆ ನಿಂತ ರಕ್ಷಕರಂತೆ ಕಂಡಿರಬೇಕು. ಕೊಳ್ಳದ ಆಳದಲ್ಲಿರುವ ಗುಹೆ, ಅದರ ಮುಂದೆ ಹರಿಯುತ್ತಿರುವ ತೊರೆ, ಆಂತರಿಕ ಪರಿಭಾವನೆಯ ಪರಿಪಕ್ವತೆಗೆ ಸಾಕಾರಶಕ್ತಿಯಾಗಿ ಪರಿಣಮಿಸಿರಬೇಕು. ಕಲ್ಯಾಣದ ಮಹಾಮನೆಯ ಪರಿಕಲ್ಪನೆ ಇಲ್ಲಿ ಇನ್ನೊಂದು ಅರ್ಥದಲ್ಲಿ ಪೂರ್ಣಗೊಳ್ಳಲು ಮಾಧ್ಯಮವೆಂದು ಅನ್ನಿಸಿರಬೇಕು. ಆದ್ದರಿಂದ ಶರಣರೆಲ್ಲ ಅಲ್ಲಿ ಉಳಿದರೆಂದು 'ಉಳವಿ'ಯಾಯಿತು" – ಹೀಗೆ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಈ ಹೆಸರಿಗೆ ಕಾವ್ಯಾತ್ಮಕವಾಗಿ ವಿವರಣೆಯನ್ನು ಕೊಡುತ್ತಾರೆ.

ಕಲ್ಯಾಣದಲ್ಲಿ ನಡೆದ ಕ್ರಾಂತಿಯಿಂದಾಗಿ ಚನ್ನಬಸವಣ್ಣನ ನೇತೃತ್ವದಲ್ಲಿ ಶರಣರ ಒಂದು ಗುಂಪು ಶರಣಸಾಹಿತ್ಯದ ಕಟ್ಟುಗಳನ್ನು ಹೊತ್ತುಕೊಂಡು ಉಳವಿಯ ಕಡೆ ಬರುತ್ತದೆ. ಅವರ ಮುಖ್ಯ ಉದ್ದೇಶ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ವಚನಸಾಹಿತ್ಯದ ಕಟ್ಟುಗಳನ್ನು ಜೋಪಾನವಾಗಿರಿಸುವುದು. ಶರಣರು ಅವುಗಳನ್ನು ಗಾಡಿಗಳಲ್ಲಿ ತುಂಬಿಕೊಂಡು ದಟ್ಟ ಅರಣ್ಯದ ಹಾದಿಗಳಲ್ಲಿ ಕ್ರಮಿಸತೊಡಗುತ್ತಾರೆ. ದಾರಿಯಲ್ಲಿಯೇ ಕೆಲವು ಶರಣರು ಐಕ್ಯರಾದರು. ಸೋಮದೇವನ ಸೈನ್ಯ ಶರಣರನ್ನು ಮಾರ್ಗಮಧ್ಯದಲ್ಲಿ ಮುತ್ತಿತು. ಅವರಿಗೆ ಶರಣರನ್ನು ಕೊಲ್ಲುವುದಕ್ಕಿಂತ ಹೆಚ್ಚಾಗಿ ವಚನದ ಕಟ್ಟುಗಳನ್ನು ನಾಶಮಾಡುವುದು ಮುಖ್ಯವಾಗಿತ್ತು.

ಸೂಪಾ ಹತ್ತಿರ 'ಜಗಳಪೇಟ್' ಎನ್ನುವ ಸ್ಥಳವಿದೆ. ಪ್ರಾಯಶಃ ಈ ಸ್ಥಳದಲ್ಲಿ ಬಿಜ್ಜಳನ ಸೈನ್ಯಕ್ಕೂ, ಶರಣರಿಗೂ ಘರ್ಷಣೆ ನಡೆದಿರಬೇಕು. ಆ ಕಾರಣಕ್ಕೆ ಈ ಸ್ಥಳಕ್ಕೆ ಜಗಳಪೇಟ್ ಎನ್ನುವ ಹೆಸರು ಬಂದಿದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಈ ಸಂದರ್ಭದಲ್ಲಿ ಶರಣರು ತಾಳೆಯೋಲೆಗಳನ್ನು ತುಂಬಿಕೊಂಡು ಬರುತ್ತಿದ್ದ ಗಾಡಿಗೆ ಸೈನಿಕರು ಬೆಂಕಿ ಹಚ್ಚುತ್ತಿದ್ದರಂತೆ. ಇದನ್ನು ನಿರೀಕ್ಷಿಸಿದ್ದ ಶರಣರು ಖಾಲಿ ತಾಳೆಯೋಲೆಗಳನ್ನು ಗಾಡಿಗೆ ತುಂಬಿ, ವಚನಗಳ ಕಟ್ಟುಗಳನ್ನು ಗುಪ್ತಮಾರ್ಗದಲ್ಲಿ ಸಾಗಿಸುತ್ತಿದ್ದರಂತೆ. ಬಿಜ್ಜಳನ ಸೈನಿಕರು ತಾವು ನಿಜವಾದ ವಚನದ ಕಟ್ಟುಗಳನ್ನು ನಾಶಮಾಡಿದೆವು ಎಂದು ಸಂಭ್ರಮಿಸಿದರಂತೆ ಎನ್ನುವ ಐತಿಹ್ಯ ಪ್ರಚಲಿತವಿದೆ.

ಶರಣರು ತಮ್ಮ ಅಂತಿಮ ಕರ್ಮಭೂಮಿಯನ್ನು ಮೊದಲೇ ನಿರ್ಧರಿಸಿಕೊಂಡಂತೆ ಕಂಡುಬರುತ್ತದೆ. ಅಕ್ಕ ಮತ್ತು ಅಲ್ಲಮ – ಶ್ರೀಶೈಲ, ಸಿದ್ಧರಾಮ – ಸೊನ್ನಲಿಗಿ, ಬಸವಣ್ಣ – ಕೂಡಲಸಂಗಮ ಇತ್ಯಾದಿ. ಆದರೆ ಚನ್ನಬಸವಣ್ಣ ಹೀಗೆ ಉಳಿವಿಗೆ ಬರುವ ನಿರ್ಧಾರವನ್ನು ಮಾಡಿದ್ದಂತೆ ಕಂಡುಬರುವುದಿಲ್ಲ. ದಟ್ಟ ಅರಣ್ಯದಿಂದ ಕೂಡಿದ್ದ ಈ ಪ್ರದೇಶವನ್ನು ಆತ ವಚನ ಸಾಹಿತ್ಯದ ಸಂರಕ್ಷಣೆಯ ದೃಷ್ಟಿಯಿಂದ ಅನಿವಾರ್ಯವಾಗಿ ಆಯ್ಕೆ ಮಾಡಿಕೊಂಡಂತೆ ಕಂಡುಬರುತ್ತದೆ. ಆ ಮುಂದಾಲೋಚನೆ ಯಶಸ್ವಿಯಾದದ್ದು ಕನ್ನಡಿಗರ ಸೌಭಾಗ್ಯ. ಇಲ್ಲದಿದ್ದರೆ ಈಗ ನಮಗೆ ಲಭ್ಯವಾಗಿರುವಷ್ಟು ವಚನಗಳೂ ನಮ್ಮ ಪಾಲಿಗೆ ದಕ್ಕುತ್ತಿರಲಿಲ್ಲ. ಇಲ್ಲಿ ವಾಸ್ತವ್ಯ ಮಾಡಿದ ಚನ್ನಬಸವಣ್ಣ ೧೧೬೮ ರಲ್ಲಿ, ತನ್ನ ಇಪ್ಪತ್ತನಾಲ್ಕನೇ ವಯಸ್ಸಿನಲ್ಲಿ ಲಿಂಗೈಕ್ಯನಾಗುತ್ತಾನೆ. ರುದ್ರಮುನಿಯಿಂದ ವಿಧಿವತ್ತಾಗಿ ಅಂತ್ಯಸಂಸ್ಕಾರವಾಯಿತು. ಈಗಿರುವ ಆತನ ಗದ್ದುಗೆ, ಅವನು ನಿತ್ಯವೂ ಕುಳಿತು ಧ್ಯಾನ ಮಾಡುತ್ತಿದ್ದ ಸ್ಥಳವೇ ಆಗಿದೆ.

### ಕೂಡಲಸಂಗಮ

ಇಂದು ಬಾಗಲಕೋಟೆ ಜಿಲ್ಲೆಗೆ ಸೇರಿರುವ ಈ ಕ್ಷೇತ್ರ, ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮಸ್ಥಾನದಲ್ಲಿದೆ.

> ಈ ಕ್ಷೇತ್ರ, ಕೃಷ್ಣಾ–ಮಲಪ್ರಭೆಯರ ಸಂಗಮ. ಗುರು–ಶಿಷ್ಯರ ಸಂಗಮ. ಭಕ್ತ ಜಂಗಮರ ಸಂಗಮ. ಅಂಗಲಿಂಗಗಳ ಸಂಗಮ. ಅಷ್ಟೇ ಅಲ್ಲ, ಈ ಸಂಗಮವು ಉಗಮಸ್ಥಾನವೂ ಹೌದು. ಕಲ್ಯಾಣದ ಉಗಮವಿದು ಸಂಗಮ. ಶರಣ ಧರ್ಮ ಸಂಸ್ಕೃತಿಯ ಸಂಗಮವಿದು ಸಂಗಮ. ಬಸವಣ್ಣನಂಥ ವಿಶ್ವವಿಭೂತಿಯನ್ನು ವಿಶ್ವಕ್ಕೆ ಕಾಣಿಕೆಯಿತ್ತ ಪುಣ್ಯಭೂಮಿ, ಈ ಸಂಗಮ. ಮಾನವ ಕುಲವು ಕಲ್ಯಾಣಿ ಬಸವಣ್ಣನನ್ನು ರೂಪಿಸಿದ ಜಾತವೇದ ಮುನಿಗಳ ತಪೋಭೂಮಿ ಈ ಸಂಗಮ.
>
> – ಪೂಜ್ಯ ಶ್ರೀ ಜ.ಚ.ನಿ.

ರಾತ್ರಿಯೊಳು ಶಿವರಾತ್ರಿ, ಜಾತ್ರೆಯೊಳು ಶ್ರೀಗಿರಿ
ಕ್ಷೇತ್ರದೊಳಧಿಕ ಕೂಡಲಗಿ, ಶಿವತತ್ತ್ವ
ಸ್ತೋತ್ರದೊಳಧಿಕ ಸರ್ವಜ್ಞ

ಸರ್ವಜ್ಞನ ಈ ಮಾತು ಕೂಡಲಸಂಗಮದ ಮಹತ್ವವನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. 'ಕೂಡಲ' ಎನ್ನುವುದು ಎರಡು ನದಿಗಳ ಕೂಡುವಿಕೆಯನ್ನೂ, 'ಸಂಗಮ' ಎನ್ನುವುದು ಅಲ್ಲಿನ ಕ್ಷೇತ್ರಾಧಿಪತಿಯಾದ 'ಸಂಗಮನಾಥ'ನನ್ನೂ ಸೂಚಿಸುತ್ತವೆ ಎಂದು ಪೂಜ್ಯ ಜ.ಚ.ನಿ.ಯವರು ಅಭಿಪ್ರಾಯಪಡುತ್ತಾರೆ. ಭಾಷಾಶಾಸ್ತ್ರಜ್ಞರು ಈ ಎರಡು ಶಬ್ದಗಳ ಅರ್ಥವೂ ಒಂದೇ, ಒಂದು ಕನ್ನಡ ಪದ, ಮತ್ತೊಂದು ಸಂಸ್ಕೃತ ಪದ ಎಂದು ಅರ್ಥೈಸುತ್ತಾರೆ. ಇದೇನೇ ಇರಲಿ ಕನ್ನಡ ನಾಡಿನ ವೀರಶೈವ ಕ್ಷೇತ್ರಗಳಲ್ಲಿ ಕೂಡಲಸಂಗಮಕ್ಕೆ ವಿಶೇಷ ಸ್ಥಾನವಿದೆ. ಅದರೊಡನೆ ಅನೇಕ ತೆರನ ಭಾವಕೋಶಗಳು ಮಿಳಿತಗೊಂಡಿವೆ.

ಈ ಕ್ಷೇತ್ರಕ್ಕೆ ಯುಗಯುಗಗಳ ಚರಿತ್ರೆಯಿರುವುದನ್ನೂ ವಿದ್ವಾಂಸರು ಗುರುತಿಸಿದ್ದಾರೆ. ಕೃತಯುಗದಲ್ಲಿ ಇದಕ್ಕೆ **'ಭಾಸ್ಕರ ಕ್ಷೇತ್ರ'** ಎನ್ನುವ ಹೆಸರಿದ್ದಿತು. ಈ ಕ್ಷೇತ್ರದ ಕುದುರೆಯ ಕಲ್ಲಿನ ಬಳಿ ಒಂದು ಸೂರ್ಯತೀರ್ಥವಿದೆ. ಇದರಲ್ಲಿ ಮಿಂದು ಚಂಡೇಶ್ವರನನ್ನು ಅರ್ಚಿಸಿದರೆ ಮುಕ್ತಿ ದೊರಕುತ್ತದೆ ಎನ್ನುವ ಭಾವನೆ ಇದೆ.



ಕೂಡಲಸಂಗಮದಲ್ಲಿರುವ ಐಕ್ಯಮಂಟಪ

ತ್ರೇತಾಯುಗದಲ್ಲಿ ಇದು **'ಪರಶುರಾಮ ಕ್ಷೇತ್ರ'** ಅನಿಸಿತ್ತು. ಇಲ್ಲಿ ಪರಶುರಾಮನು ಅಮರೇಶ್ವರ ಲಿಂಗವನ್ನು ಅಂಗೈಯಲ್ಲಿ ಇಟ್ಟು ಅರ್ಚಿಸುತ್ತಿದ್ದನಂತೆ. ಅನಂತರ ತನ್ನ ಅಂಗೈಲಿಂಗದಲ್ಲಿಯೇ ಲೀನವಾದನಂತೆ. ಇನ್ನೊಂದು ಹೇಳಿಕೆಯ ಪ್ರಕಾರ ಅವನು ಇಲ್ಲಿನ ಸಂಗಮೇಶ್ವರ ಲಿಂಗವನ್ನು ಪೂಜಿಸಿ ಮಾತೃಹತ್ಯಾ ದೋಷವನ್ನು ಪರಿಹರಿಸಿಕೊಂಡನಂತೆ. ಆದ್ದರಿಂದ ಇದಕ್ಕೆ **ಕೂಡಲಸಂಗಮಕ್ಷೇತ್ರ** ವೆಂದು ಹೆಸರಾಯಿತಂತೆ.

ದ್ವಾಪರಯುಗದಲ್ಲಿ ಇದರ ಹೆಸರು **'ಕಪಿಲ ಕ್ಷೇತ್ರ'**. ಆ ಕಾಲದ ಋಷಿಮುನಿಗಳು ಗೋವುಗಳನ್ನು ಇಲ್ಲಿ ಕಾಪಾಡಿ ಕೊಂಡಿದ್ದರಂತೆ. ಕಪಿಲೆಗಳು ಇದ್ದ ಜಾಗವಾದ್ದರಿಂದ ಇದು ಕಪಿಲ ಕ್ಷೇತ್ರವೆನಿಸಿತು. ಸಾಂಖ್ಯಶಾಸ್ತ್ರವನ್ನು ರಚಿಸಿದ ಕಪಿಲ ಮುನಿ ಇಲ್ಲಿ ಅನುಷ್ಠಾನ ಮಾಡಿದಂತೆಯೂ ಕಥೆಯಿದೆ.

ಕಲಿಯುಗದ ಆರಂಭದಲ್ಲಿ ಇದಕ್ಕೆ **'ಕೂಡಲಿ'**, **'ಕಪ್ಪಡಿ ಸಂಗಮ'**, **'ಕೂಡಲ'** ಎಂಬ ಹೆಸರುಗಳಿದ್ದವು. ಅನಂತರ ಸಂಗಮನಾಥನ ದೇವಸ್ಥಾನದ ನಿರ್ಮಾಣದ ನಂತರ (ಒಂದು ಸಾವಿರ ವರ್ಷಗಳ ಹಿಂದೆ) ಇದಕ್ಕೆ **'ಕೂಡಲಸಂಗಮ'** ಎಂದು ಹೆಸರಾಯಿತು.

ಕೃಷ್ಣಾ ವಿಷ್ಣುವಿನ ಪುತ್ರಿಯಂತೆ. ಗಂಗೆ 'ವಿಷ್ಣುಪಾದೋದ್ಭವೆ'. ಆದ್ದರಿಂದ ವಿಷ್ಣುಪದಿಯಾದ ಉತ್ತರದ ಗಂಗೆಗಿಂತ, ವಿಷ್ಣುವಿನ ತನುರೂಪಳೇ ಆದಂತಹ ಕೃಷ್ಣೆ ಶ್ರೇಷ್ಠಳು. ಕೆಳಗಿನ ಕವಿವಾಣಿಗೆ ಇಂತಹ ನಂಬಿಕೆಗಳೇ ಸ್ಫೂರ್ತಿ.

**ಕೃಷ್ಣಾ ವಿಷ್ಣುತನುಃ ಸಾಕ್ಷಾತ್ ವೇಣ್ಯಾಂ ದೇವೋ ಮಹೇಶ್ವರಃ ।**
**ಉಭಯೋಃ ಸಂಗಮೋ ಯತ್ರ ಮುಕ್ತಿಸ್ತತ್ರ ನ ಸಂಶಯಃ ॥**

ಇಲ್ಲಿ ಕೃಷ್ಣಾ ನದಿ ಪೂರ್ವಕ್ಕೆ ಹರಿಯುತ್ತದೆ. ಮಲಪ್ರಭೆ ಉತ್ತರಕ್ಕೆ ಹರಿಯುತ್ತದೆ. ಆದ್ದರಿಂದ ಇವುಗಳು ಕೂಡುವ ಸ್ಥಳದಲ್ಲಿ ಸ್ನಾನ ಮಾಡಿ, ದಾನಧರ್ಮಗಳನ್ನು ಆಚರಿಸಿದರೆ, ಕಾಶಿಯಲ್ಲಿ ಲಭಿಸುವುದಕ್ಕಿಂತ ಹೆಚ್ಚಿನ ಪುಣ್ಯ ಬರುತ್ತದೆ ಎನ್ನುವ ಮತ್ತೊಂದು ನಂಬಿಕೆಯಿದೆ.

**ಸೂರ್ಪಾಲ್ಯಾಂ ಸಂಗಮೇ ಚೈವ ಛಾಯಾಯಾಂ ಶ್ರೀಗಿರೌ ತಥಾ । ಸರ್ವತ್ರ ಸುಲಭಾ ಕೃಷ್ಣಾ ಚತುಃಸ್ಥಾನೇಷು ದುರ್ಲಭಾ ॥**

ಕೃಷ್ಣಾನದಿಯು ಸೂರ್ಪಾಲಾ, ಸಂಗಮ, ಛಾಯಾ, ಶ್ರೀಗಿರಿ – ಈ ನಾಲ್ಕು ಪವಿತ್ರ ಕ್ಷೇತ್ರಗಳಲ್ಲಿ ಹರಿಯುತ್ತದೆ. ಇದಕ್ಕೆ "ವೃದ್ಧಗಂಗೆ" ಎಂದೂ ಕರೆಯುತ್ತಾರಂತೆ. ಇದಕ್ಕೆ ಕಾರಣ ತಿಳಿಯದು.

ಮತ್ತೊಂದು ನದಿಯಾದ ಮಲಪ್ರಭೆಗೆ, 'ಮಲಾಪಹಾರಿಣಿ' ಎಂದೂ ಕರೆಯುತ್ತಾರೆ. ಇದರಲ್ಲಿ ಮಿಂದ ಭಕ್ತರ 'ಮಲಗಳು' (ಪಾಪಗಳು) ನಾಶವಾಗುತ್ತವೆ. ಆದ್ದರಿಂದಲೇ ಇದು ಮಲಾಪ ಹಾರಿಣಿ. ಬೆಳಗಾಂ ಜಿಲ್ಲೆಯ ಕುಳಕುಂಬಿ ಎಂಬಲ್ಲಿ ಉಗಮವಾಗುವ ಈ ನದಿ, ಕೂಡಲಸಂಗಮದಲ್ಲಿ ಕೃಷ್ಣೆಯೊಡನೆ ಬೆರೆತು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.

ಇಲ್ಲಿನ ಸಂಗಮೇಶ್ವರನಿಗೆ ಕೃತಯುಗದಲ್ಲಿ 'ಅಮೃತೇಶ್ವರ' ನೆಂದು, ತ್ರೇತಾಯುಗದಲ್ಲಿ 'ಸಿದ್ಧೇಶ್ವರ' ನೆಂದು, ದ್ವಾಪರದಲ್ಲಿ 'ಕಪಿಲೇಶ್ವರ'ನೆಂದು, ಕಲಿಯುಗದಲ್ಲಿ 'ಸಂಗಮೇಶ್ವರ'ನೆಂದು ಹೆಸರು ಬಂದಿದೆ.

ಇಲ್ಲಿನ ಲಿಂಗದ ವೈಶಿಷ್ಟ್ಯವೆಂದರೆ ಲಿಂಗಕ್ಕೂ ಪೀಠಕ್ಕೂ ನಡುವೆ ಪೊಳ್ಳಾದ ಭಾಗವಿದೆ. ಇಲ್ಲಿ ಯಾವಾಗಲೂ ನೀರು ಇರುತ್ತದೆ. ನದಿಗಿಂತ ಈ ಲಿಂಗ ಎತ್ತರದ ಸ್ಥಳದಲ್ಲಿ ಇರುವುದ ರಿಂದ ನದಿಗೂ ಲಿಂಗಕ್ಕೂ ಯಾವ ಸಂಬಂಧವೂ ಇಲ್ಲ. ಕಾರಣಗಳು ಏನೇ ಇರಲಿ, ಆಸ್ತಿಕ ಸಮೂಹಕ್ಕೆ ಇದು ಇಂದಿಗೂ ಪವಾಡ ಸದೃಶವಾಗಿ ಕಂಡುಬರುತ್ತದೆ. ಇದು ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಪರಿಗಣಿತವಾಗದಿದ್ದರೂ ಅವುಗಳಲ್ಲಿರುವ ಎಲ್ಲ ಬಗೆಯ ಕಳೆಗಳೂ ಇದರಲ್ಲಿಯೂ ಕಂಡುಬರುತ್ತವೆ.

ಇಲ್ಲಿ ಜಾನಕಿ ಮಠ ಅಥವಾ ದೇವನಾಯಕನ ಮಠ, ಮಂಟೇಸ್ವಾಮಿ ಮಠ, ಸಾರಂಗ ಮಠಗಳು (ಮೇಲಿನ ಮಠ, ಕೆಳಗಿನ ಮಠ) ಇವೆ. ಕೆಳಗಿನ ಮಠದಲ್ಲಿ ಬಸವಣ್ಣನವರ ಗುರುಗಳಾದ ಈಶಾನೇಶ್ವರ ಒಡೆಯರ ಗದ್ದುಗೆ ಇದೆ. ಅಲ್ಲಿ ಅವರ ಪಾದುಕೆಗಳಿವೆ. ಇವರಿಗೆ ಜಾತವೇದ ಮುನಿಗಳು ಎಂಬ ಮತ್ತೊಂದು ಪ್ರಸಿದ್ಧ ಹೆಸರು ಇದೆ. ಇವರು ಬಸವಣ್ಣನವರ ವಿದ್ಯಾಗುರುಗಳು, ದೀಕ್ಷಾಗುರುಗಳು. ಬಸವಣ್ಣನವರ ಕ್ರಾಂತದರ್ಶಿತ್ವದ ಗುಣಗಳೆಲ್ಲಾ ಇಲ್ಲಿಯೇ ಕುಡಿವಡೆದದ್ದು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕಲ್ಯಾಣದ ಕ್ರಾಂತಿಯ ನಂತರ ಬಸವಣ್ಣನವರು ಮತ್ತೆ ಇಲ್ಲಿಗೇ ಬಂದು ಬಯಲಾಗುತ್ತಾರೆ. ಅಷ್ಟು ಹೊತ್ತಿಗಾಗಲೇ ಜಾತವೇದ ಮುನಿಗಳು ಆಗಾಗಲೇ ಬಯಲಾಗಿರುತ್ತಾರೆ. ಕೂಡಲಸಂಗಮಕ್ಕೆ ಅನತಿ ದೂರದಲ್ಲಿರುವ ತಂಗಡಗಿ ಎಂಬಲ್ಲಿ ಹಡಪದ ಅಪ್ಪಣ್ಣ ಹಾಗೂ ನೀಲಾಂಬಿಕೆಯರ ಸಮಾಧಿಗಳಿವೆ.




## ಎಡೆಯೂರು

ಹನ್ನೆರಡನೆಯ ಶತಮಾನ ಶರಣರ ಆಂದೋಲನದ ಪ್ರಪ್ರಥಮ ಹಾಗೂ ಪ್ರಮುಖ ಕಾಲಘಟ್ಟವಾದರೆ, ಹದಿನೈದನೇ ಶತಮಾನ ಮತ್ತೊಂದು ಪ್ರಮುಖ ಕಾಲಘಟ್ಟ. ಮೊದಲ ಘಟ್ಟದ ನಾಯಕರು ಬಸವಣ್ಣನವರಾದರೆ, ಎರಡನೆಯ ಘಟ್ಟದ ನಾಯಕರು ಸಿದ್ಧಲಿಂಗ ಯತಿಗಳು. ಮೂಲತಃ ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಗೋಸಲ ಪೀಠಕ್ಕೆ ಸೇರಿದ ಸಿದ್ಧಲಿಂಗರು, ಎಡೆಯೂರು ಬಳಿಯ **'ಕಗ್ಗೆರೆ'** ಎಂಬ ಗ್ರಾಮದ ತೋಟದಲ್ಲಿ ಸಾಧನೆ ಮಾಡಿ ಸಿದ್ಧಪುರುಷರಾದ ಕಾರಣಕ್ಕೆ, ಇವರಿಗೆ **ತೋಂಟದ ಸಿದ್ಧಲಿಂಗಯತಿಗಳು** ಎನ್ನುವ ಹೆಸರಾಯಿತು. ಮುಂದೆ ಇವರು, ೭೦೧ ಜನ ವಿರಕ್ತರು, ೩೦೦೦ ಚರಮೂರ್ತಿಗಳನ್ನು ಕಟ್ಟಿಕೊಂಡು ದೇಶದಾದ್ಯಂತ ಸಂಚರಿಸಿ ವಚನಸಾಹಿತ್ಯವನ್ನು ಸಂಗ್ರಹಿಸಿ, ಸಂಸ್ಕರಿಸಿ ಜಗತ್ತಿಗೆ ಕೊಟ್ಟರು. ಹಾಗೆಯೇ ವೀರಶೈವ ಧರ್ಮ ಪ್ರಸಾರವನ್ನೂ ಕೈಗೊಂಡರು. ಮುಂದೆ ಶೂನ್ಯಸಿಂಹಾಸನವನ್ನೂ ಸಹ ಅಲಂಕರಿಸಿದರು. ಆದ್ದರಿಂದಲೇ ಇವರನ್ನು **'ದ್ವಿತೀಯ ಅಲ್ಲಮ'** ಎಂದು ಕರೆಯುತ್ತಾರೆ.

ಇಂದು ತುಮಕೂರು ಜಿಲ್ಲೆಯಲ್ಲಿ ಇರುವ ಎಡೆಯೂರಿನಲ್ಲಿ ಭಕ್ತ ಸಮುದಾಯದ ಶ್ರದ್ಧಾಭಕ್ತಿಯ ಕೇಂದ್ರವಾಗಿರುವುದು ಸಿದ್ಧಲಿಂಗಯತಿಗಳ ಗದ್ದುಗೆ. ಅನೇಕ ಜನ ಇದನ್ನು ದೇವಸ್ಥಾನ ಎನ್ನುತ್ತಾರೆ. ವೀರಶೈವ ಪರಂಪರೆಯಲ್ಲಿ ದೇವಸ್ಥಾನಗಳು ಹಾಗೂ ಮಠಗಳು – ಈ ಎರಡರಲ್ಲಿಯೂ ಪೂಜಾ ಕೈಂಕರ್ಯಗಳು ನಡೆಯುತ್ತವೆ, ಜಾತ್ರಾ ಮಹೋತ್ಸವಗಳೂ ನಡೆಯುತ್ತವೆ. ಆದ್ದರಿಂದಲೇ ಕೆಲವೊಮ್ಮೆ ಮಠಗಳೂ (ಅರ್ಥಾತ್ ಗದ್ದುಗೆಗಳು) ದೇವಸ್ಥಾನಗಳಂತೆ ಭಾವಿಸಲ್ಪಟ್ಟಿವೆ. ಹಾಗೆಯೇ ಈ ಕ್ಷೇತ್ರದಲ್ಲಿಯೂ ಸಿದ್ಧಲಿಂಗೇಶ್ವರರ ಗದ್ದುಗೆಯನ್ನು ದೇವಸ್ಥಾನವೆಂದೇ ಭಾವಿಸಿದ್ದಾರೆ. ಆದರೆ ಇಲ್ಲಿ ಕಂಡುಬರುವ ಶಾಸನವೊಂದರಲ್ಲಿ ಇದನ್ನು 'ತೋಂಟದ ಸ್ವಾಮಿ ಮಠ'ವೆಂದೇ ಕರೆಯಲಾಗಿದೆ. ಕಾವ್ಯಗಳಲ್ಲಿಯೂ ಈ ಹೆಸರೇ ಕಂಡುಬರುತ್ತದೆ. ಪ್ರಾಯಶಃ ಇಪ್ಪತ್ತನೆಯ ಶತಮಾನದ ಪ್ರಾರಂಭದ ಸರ್ಕಾರಿ ದಾಖಲೆಗಳಲ್ಲಿ ಇದು ದೇವಸ್ಥಾನವೆಂದು ಕರೆಯಲ್ಪಟ್ಟಿದೆ. ಇಂದು ನವೀಕರಣಗೊಂಡಿರುವ ಮೂಲಮಠವು ಚಿಕ್ಕಮಗಳೂರು ಜಿಲ್ಲೆಯ ದಾನಿವಾಸಿ ಗ್ರಾಮದ ಅರಸರಾಗಿದ್ದ ಚನ್ನವೀರಪ್ಪ ಒಡೆಯರು ಕಟ್ಟಿಸಿಕೊಟ್ಟದ್ದು. ಮೂಲತಃ ಇದೊಂದು ವಿರಕ್ತ ಸಂಪ್ರದಾಯದ ಮಠ. ಸಿದ್ಧಲಿಂಗಯತಿಗಳು ಸಮಾಧಿ ಪ್ರವೇಶ ಮಾಡಿದ ದಿನದಂದು ಸಮಯಕ್ಕೆ ಸರಿಯಾಗಿ – ಮಧ್ಯಾಹ್ನ ಹನ್ನೆರಡು ಘಂಟೆ – ಪ್ರತಿ ವರ್ಷ ಇಲ್ಲಿ ರಥೋತ್ಸವವು ನಡೆಯುತ್ತದೆ.

ಶೂನ್ಯಸಿಂಹಾಸನ ಜಂಗಮ ಪರಂಪರೆಯಂತೆ ಜಗದ್ಗುರುಗಳಾದವರು ಲೋಕಸಂಚಾರಿಗಳಾಗಿ ಸಾಮಾಜಿಕ ಧಾರ್ಮಿಕ ಕರ್ತವ್ಯಗಳನ್ನು ಪೂರೈಸಿ ಮತ್ತೆ ತಮ್ಮ ಮೂಲ ಮಠಕ್ಕೆ ಆಗಮಿಸುವ ಪದ್ಧತಿ. ಆದರೆ ಕೆಲವರು ಲೋಕಸಂಚಾರದ ಸಂದರ್ಭದಲ್ಲಿ ಎಲ್ಲೋ ದೂರದ ಸ್ಥಳಗಳಲ್ಲಿ ಲಿಂಗೈಕ್ಯರಾದರೆ ಅವರನ್ನು ಆಯಾ ಸ್ಥಳದಲ್ಲಿಯೇ ಗದ್ದುಗೆ ಮಾಡುವ ಪರಿಪಾಠವೂ ಇತ್ತು. ಈಗಲೂ ಈ ಮಠದ ಕೆಲವು ಪೀಠಗಳು ಗದಗ, ಗುಲಬರ್ಗಾ, ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಇವೆಲ್ಲ

ಮೂಲಮಠದ ಶಾಖಾಮಠಗಳೆಂದು ಪರಿಗಣಿತವಾಗುತ್ತವೆ. ಕೆಲವೊಮ್ಮೆ ಬೇರೆ ಬೇರೆ ಕಾರಣಗಳಿಗಾಗಿ ಅವು ಸ್ವತಂತ್ರವಾಗಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದು, ಬಹು ದೊಡ್ಡ ಶ್ರದ್ಧಾಕೇಂದ್ರಗಳಾಗುತ್ತವೆ. ಉದಾಹರಣೆಗೆ ಗದಗ-ಡಂಬಳ ಮಠ. ಇದು ಎಡೆಯೂರು ಪರಂಪರೆಗೆ ಸೇರಿದ ಒಂದು ಮಠವಾಗಿದೆ.

### ಸಿರಿಗೆರೆಯ ಶ್ರೀ ತರಳಬಾಳು ಕ್ಷೇತ್ರ

ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಿರಿಗೆರೆ, ವಿಶ್ವಬಂಧು ಮರುಳ ಸಿದ್ಧರ ಸಾಧನಾಸ್ಥಳ. ಇವರ ಕಾಲ ಹನ್ನೆರಡನೇ ಶತಮಾನ. ಮೂಲತಃ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಉಜ್ಜಯಿನಿಯ ಹತ್ತಿರದಲ್ಲಿದ್ದ ಕಗ್ಗಲ್ಲುಪುರದ (ಈಗ ಅದು ಬೇಚರಾಕ್ ಗ್ರಾಮ) ಮೋಚಿ ಜನಾಂಗಕ್ಕೆ ಸೇರಿದವರು ಮರುಳಸಿದ್ಧರು. ಇವರು ಬಾಲ್ಯದಲ್ಲಿಯೇ ಅನೇಕ ಪವಾಡ ಸದೃಶ ಕೆಲಸಗಳನ್ನು ಮಾಡಿದವರು, ಯಜ್ಞಯಾಗಾದಿಗಳನ್ನು ವಿರೋಧಿಸಿದವರು. ಪ್ರಾಣಿಬಲಿಯನ್ನು ಕಂಡು ಕಣ್ಣೀರು ಹಾಕಿದವರು. ಪಟ್ಟಭದ್ರ ಹಿತಾಸಕ್ತಿಗಳು ಇವರನ್ನು ಹಗೇವಿಗೆ ಹಾಕಿ ಕೊಲ್ಲುವ ಪ್ರಯತ್ನ ಮಾಡಿದರು. ಇದರ ಜೊತೆಗೆ ಇನ್ನೂ ಅನೇಕ ರೀತಿಯ ಮಾರಕ ಪ್ರಯತ್ನಗಳು ನಡೆದವು. ಮುಂದೆ ಇವರು ಚಿತ್ರದುರ್ಗದ ಬೆಟ್ಟದಲ್ಲಿ (ಚಿನ್ಮೂಲಾದ್ರಿ) ರೇವಣಸಿದ್ಧರಿಂದ ದೀಕ್ಷೆಯನ್ನು ಪಡೆಯುತ್ತಾರೆ. ಅನಂತರ ಎಲ್ಲ ಕಡೆ ಸಂಚಾರ ಮಾಡಿದ ಮರುಳಸಿದ್ಧರು ಹೊಸಪೇಟೆ ಹತ್ತಿರದ 'ತೆಲುಗುಬಾಳು' ಎಂಬಲ್ಲಿಗೆ ಬಂದು, ಅಲ್ಲಿ ಕೃಷಿಕರ ಮಗನಾಗಿದ್ದ ಮೂಕ ಬಾಲಕ ಸಿದ್ಧಯ್ಯನಿಗೆ ಮಾತು ಬರುವಂತೆ ಮಾಡಿ 'ತರಳ, ಬಾಳು' ಎಂದು ಆಶೀರ್ವದಿಸಿ ತಮ್ಮ ಶಿಷ್ಯನನ್ನಾಗಿ ಅಂಗೀಕರಿಸುತ್ತಾರೆ. ಅಲ್ಲಿಂದ ಮುಂದೆ **ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನ - ಶ್ರೀ ತರಳಬಾಳು ಜಗದ್ಗುರು ಪೀಠ** ಪ್ರಾರಂಭವಾಗುತ್ತದೆ. ಇಲ್ಲಿನವರೆಗೆ ಈ ಪೀಠದಲ್ಲಿ ೨೧ ಜನ ಜಗದ್ಗುರುಗಳು ಬಂದಿದ್ದು, ಈಗ ಜಗದ್ಗುರುಗಳಾಗಿರುವವರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು.

ಮರುಳಸಿದ್ಧರು ಮಾದಿಗರ ಜನಾಂಗದಲ್ಲಿ ಜನಿಸಿದ ಕಾರಣಕ್ಕೋ ಅಥವಾ ಹಿಂದುಳಿದವರ ಬಗ್ಗೆ ಅವರು ತೋರಿಸಿದ ಹೆಚ್ಚಿನ ಕಾಳಜಿಯಿಂದಲೋ ಏನೋ, ಉಜ್ಜಯಿನಿಯಲ್ಲಿ ಜಾತ್ರೆಯ ಸಂದರ್ಭದಲ್ಲಿ ಮರುಳಸಿದ್ಧರಿಗೆ ಮಾಡುವ ಮೊದಲ ಆರತಿ, ಮಾದಿಗ ಜನಾಂಗದವರಿಂದ ನಡೆಯುತ್ತದೆ. ಅದಲ್ಲದೆ, ತೇರನ್ನು ಎಳೆಯುವವರು ಮಾದಿಗರು ಮತ್ತು ತಳವಾರರು. ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರ ಮಾಡುವಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಪ್ರಮುಖ ವೀರಶೈವ ಮಠ, ಈ ಸಿರಿಗೆರೆಯ ಮಠ. ಈ ಮಠ ಪ್ರಾರಂಭವಾದದ್ದು ೧೬ ನೇ ಶತಮಾನದಲ್ಲಿ. ಈ ಮರುಳಸಿದ್ಧ ಗುರುಪರಂಪರೆಯಲ್ಲಿ ಬಂದವರು ಶ್ರೀ ಜಂಬಪ್ಪ ದೇವರು. ಇವರು ಶ್ರೀಪೀಠದ ಹನ್ನೆರಡನೆಯ ಗುರುಗಳು. ಇವರು ಸಿರಿಗೆರೆಗೆ ಬಂದು ಪ್ರಾರಂಭದಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಾ, ತರಳಬಾಳು ಪೀಠಪರಂಪರೆಯನ್ನು ಮುಂದುವರಿಸಿದರು. ಈಗ ಇದು ಬೃಹತ್ ಮಠವಾಗಿ ಬೆಳೆದಿದೆ.

### ಸಿದ್ಧಗಂಗಾ ಕ್ಷೇತ್ರ

ಬೆಂಗಳೂರಿನಿಂದ ೬೬ ಕಿ.ಮೀ. ದೂರದಲ್ಲಿ, ಶ್ರೀಸಿದ್ಧಗಂಗಾ ಕ್ಷೇತ್ರವು ಬೆಂಗಳೂರು-ಪೂನಾ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ, ತುಮಕೂರು ನಗರಕ್ಕೆ ಹೊಂದಿಕೊಂಡಂತೆ ಇದೆ.


ಸಿದ್ಧಗಂಗಾ ಕ್ಷೇತ್ರ

ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಗೋಸಲ ಪೀಠದ ಹನ್ನೆರಡನೆಯ ಅಧಿಪತಿಗಳಾಗಿದ್ದ ಗೋಸಲ ಸಿದ್ಧೇಶ್ವರರಿಂದ ಸಿದ್ಧಗಂಗಾಮಠ ಸ್ಥಾಪಿಸಲ್ಪಟ್ಟಿತು. ಅವರು ತಮ್ಮ ನೂರೆಂಟು ಜನ ಸಹಚರರೊಡನೆ ದೇಶಪರ್ಯಟನೆ ಮಾಡುತ್ತಾ ಈ ಬೆಟ್ಟದಲ್ಲಿ ಬಂದು, ಇಲ್ಲಿನ ಗುಹೆಗಳಲ್ಲಿ ಅನುಷ್ಠಾನಕ್ಕೆ ತೊಡಗಿದರು. ಆ ದಿನಗಳಲ್ಲಿ ವಯೋವೃದ್ಧರಾದ ಸಾಧಕರೊಬ್ಬರಿಗೆ ರಾತ್ರಿ ವೇಳೆ ಬಾಯಾರಿಕೆಯಾಗಿ ಶಕ್ತಿಗುಂದಿದರು. ಆದರೆ ಅಲ್ಲಿ ಎಲ್ಲಿಯೂ ಕುಡಿಯಲು ನೀರು ಕೂಡ ಸಿಗದ ಪರಿಸ್ಥಿತಿ ಇತ್ತು. ಆಗ ಗೋಸಲ ಸಿದ್ಧೇಶ್ವರರು ತಮ್ಮ ಕೈಯಿಂದ ಬಂಡೆಯೊಂದನ್ನು ಬಡಿದಾಕ್ಷಣ ನೀರು ಚಿಮ್ಮಿ ಬಂದಿತಂತೆ. ಹೀಗೆ ಸಿದ್ಧೇಶ್ವರರಿಂದ ಗಂಗೆ ಚಿಮ್ಮಿದ ಕಾರಣಕ್ಕಾಗಿ ಇದಕ್ಕೆ 'ಸಿದ್ಧಗಂಗೆ' ಎಂದು ಹೆಸರು ಬಂದಿತಂತೆ. ಐದುನೂರು ವರ್ಷಗಳ ಇತಿಹಾಸವಿರುವ ಈ ಕ್ಷೇತ್ರ ವಿರಕ್ತ ಪರಂಪರೆಗೆ ಸೇರಿದುದಾಗಿದೆ. ಶತಾಯುಷಿಗಳಾದ ಡಾ.ಶಿವಕುಮಾರ ಸ್ವಾಮೀಜಿ ಈಗಿನ ಪೀಠಾಧಿಪತಿಗಳು.

## ಮಲೆಯ ಮಹದೇಶ್ವರ ಬೆಟ್ಟ

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರ ಕ್ಷೇತ್ರ ಏಕೀಕರಣಕ್ಕೆ ಮೊದಲು ತಮಿಳುನಾಡಿನ ಆಡಳಿತಕ್ಕೆ ಒಳಪಟ್ಟಿತ್ತು. ಮಹದೇಶ್ವರರು ೧೫ ನೇ ಶತಮಾನದಲ್ಲಿ ಇದ್ದಂತಹ ಓರ್ವ ಸಂತರು. ಇವರು ಶ್ರೀಶೈಲ ಪ್ರಾಂತ್ಯದಿಂದ ಈ ಭಾಗಕ್ಕೆ ಬಂದವರೆಂದು ಪ್ರತೀತಿ. ಇವರು ಏನನ್ನೂ ಸ್ವತಃ ಬರೆದರೆಂಬುದಕ್ಕೆ ಯಾವುದೇ ದಾಖಲೆಗಳಿಲ್ಲ. ಆದರೆ ಇವರ ಬಗ್ಗೆ ಬಂದಿರುವಷ್ಟು ಜನಪದ ಸಾಹಿತ್ಯ ಕನ್ನಡ ನಾಡಿನ ಯಾವ ಸಂತನ ಮೇಲೂ ಸೃಷ್ಟಿಯಾಗಿಲ್ಲ ಎನ್ನುವುದು ಅಚ್ಚರಿಯ ಸಂಗತಿ. 'ಮಲೆಮಹದೇಶ್ವರ ಕಾವ್ಯ' ಎಂಬುದು ಪ್ರಪಂಚದಲ್ಲಿಯೇ ಎರಡನೇ ಬೃಹತ್ ಜಾನಪದ ಕಾವ್ಯ ಎನ್ನುವ ಕೀರ್ತಿಗೆ ಭಾಜನವಾಗಿದೆ. (ಮೊದಲನೆಯ ಬೃಹತ್ ಕಾವ್ಯ 'ಗಿಲ್ಗಮಿಷ್ – ಫಿನ್‌ಲೆಂಡ್ ದೇಶದ್ದು). ಎಪ್ಪತ್ತೇಳು ಬೆಟ್ಟಗಳಿಂದ ಆವೃತವಾದ ನಡುಮಲೆಯಲ್ಲಿ ಮಹದೇಶ್ವರರ ಸಮಾಧಿ ಇದೆ. ಜನಪದರು ಇದನ್ನೂ ದೇವಸ್ಥಾನವೆಂದು ಕರೆಯುತ್ತಾರೆ. ಮಹದೇಶ್ವರರ ವಾಹನ ಹುಲಿಯಾಗಿತ್ತಂತೆ. ಆದ್ದರಿಂದಲೇ ಹುಲಿವಾಹನನಾದ ಮಹದೇಶ್ವರರ ಚಿತ್ರಗಳು ಎಲ್ಲೆಡೆ ಪ್ರಚಲಿತವಾಗಿವೆ. ಮೊತ್ತಮೊದಲು ಈ ಸ್ಥಳಕ್ಕೆ ಮಹದೇಶ್ವರರು ಬಂದಾಗ, ಅಲ್ಲಿ ಮೊದಲೇ ಸ್ಥಾಪಿತವಾಗಿದ್ದ ಸಾಲೂರು ಮಠದಲ್ಲಿ ವಾಸ್ತವ್ಯ ಹೂಡುತ್ತಾರೆ (**ಸಾಲೂರು** – ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಒಂದು ಊರು. ಅಲ್ಲಿಂದ ಬಂದ ಸಂತರೊಬ್ಬರು ಇಲ್ಲಿ ಬಂದು ಮಠ ಕಟ್ಟಿದರು. ಅದಕ್ಕಾಗಿ ಇದನ್ನು ಸಾಲೂರು ಮಠ ಎಂದು ಕರೆಯುತ್ತಾರೆ). ಮುಂದೆ ಈ ಬೆಟ್ಟಪ್ರಾಂತ್ಯದಲ್ಲಿ ನೆಲಸಿದ್ದ ಕಾಡು ಕುರುಬರು, ಸೋಲಿಗರು, ಜೇನುಕುರುಬರು ಮುಂತಾದ ಕಾಡುಜನರಿಗೆ ಮಾರ್ಗದರ್ಶಕರಾಗಿ, ಅವರಿಗೆ ಸಂಸ್ಕಾರಗಳನ್ನು ನೀಡುವ ಕಾಯಕದಲ್ಲಿ ನಿರತರಾಗುತ್ತಾರೆ.

## ಸುತ್ತೂರು ಕ್ಷೇತ್ರ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಕಪಿಲಾ ನದಿಯ ದಡದಲ್ಲಿರುವ ಸುತ್ತೂರು ಶ್ರೀಕ್ಷೇತ್ರಕ್ಕೆ ಒಂದು ಸಾವಿರ ವರ್ಷಗಳಷ್ಟು ಸುದೀರ್ಘ ಇತಿಹಾಸವಿದೆ. ಇಲ್ಲಿರುವ ವೀರಸಿಂಹಾಸನ ಮಠದ ಆದಿ ಜಗದ್ಗುರುಗಳಾದ ಶ್ರೀ ಶಿವರಾತ್ರೀಶ್ವರರು ಈ ಭಾಗದಲ್ಲಿ ಚೋಳರಿಗೂ ಗಂಗರಿಗೂ ನಡೆಯಬಹುದಾಗಿದ್ದ ಯುದ್ಧವನ್ನು ತಪ್ಪಿಸಿ, ಶಾಂತಿ ನೆಲೆಸಲು ಕಾರಣರಾದರು. ಈ ಕಾರಣಕ್ಕಾಗಿ ಚೋಳ ಚಕ್ರೇಶ್ವರನಿಂದ ಸಂಪೂಜಿತರಾಗಿ 'ರಾಜಗುರು'ಗಳೆನಿಸಿಕೊಂಡರು. ಅಂದಿನಿಂದ ಇಂದಿನ ತನಕ ಈ ಪೀಠದಲ್ಲಿ ೨೩ ಜನ ಗುರುಗಳು ಆಗಿ ಹೋಗಿದ್ದಾರೆ. ಕಲ್ಯಾಣದಲ್ಲಿ ನಡೆದ ಕ್ರಾಂತಿಯ ನಂತರ ಮುಸುಡಿ ಚೌಡಯ್ಯನೆಂಬ ಶರಣನು ಸುತ್ತೂರು ಶ್ರೀಮಠಕ್ಕೆ ಬಂದು ನೆಲೆಸಿದನು. ಅಂದರೆ ಈ ಕ್ಷೇತ್ರದ ಕೀರ್ತಿ ಕರ್ನಾಟಕದ ಉತ್ತರದ ತುತ್ತತುದಿಯಲ್ಲಿರುವ ಬಸವ ಕಲ್ಯಾಣದವರೆಗೂ ಹಬ್ಬಿತ್ತು ಎನ್ನುವುದು ಮುಖ್ಯವಾದ ಸಂಗತಿ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ಭಾಗದಲ್ಲಿ ನಡೆದ ರೈತರ ಚಳವಳಿಯಲ್ಲಿ ಶ್ರೀಮಠದ ಗುರುಗಳು ವಹಿಸಿದ ಪಾತ್ರ ಚರಿತ್ರಾರ್ಹವಾದುದು. ಈ ಕಾರಣಕ್ಕಾಗಿ ರಾಜನ ಸೈನಿಕರಿಂದ ಸುತ್ತೂರು ಶ್ರೀಮಠದ ಒಂದು ಭಾಗ ನಾಶವಾಯಿತು. ಅದಕ್ಕೆ ಎದೆಗುಂದದ ಇವರು, ರೈತರ ಪರವಾಗಿ ನಿಂತು ಅವರಿಗೆ ನೈತಿಕ ಸ್ಥೈರ್ಯವನ್ನು ತುಂಬಿದರು. ತೋಂಟದ ಸಿದ್ಧಲಿಂಗಯತಿಯ ನೇರ ಶಿಷ್ಯರಾಗಿದ್ದು, ವಚನಕಾರರೂ ಆಗಿದ್ದ ಶ್ರೀಘನಲಿಂಗಿ ಶಿವಯೋಗಿ ಎನ್ನುವವರು ಶ್ರೀಮಠದ ಪೀಠಾಧಿಪತಿಗಳಲ್ಲಿ ಒಬ್ಬರು. ಆ ಕಾಲದ ವಚನ ಸಾಹಿತ್ಯಚರಿತ್ರೆಯಲ್ಲಿ ಇವರದು ಪ್ರಮುಖವಾದ ಹೆಸರು. ಈಗ ಇರುವ ಜಗದ್ಗುರುಗಳಾದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಈ ಪರಂಪರೆಯಲ್ಲಿ ೨೪ ನೆಯವರು.

ಕನ್ನಡ ನಾಡಿನಲ್ಲಿ ಪುರಾತನ ಹಾಗೂ ನೂತನ ವೀರಶೈವ ಕ್ಷೇತ್ರಗಳು ಅಸಂಖ್ಯವಾಗಿವೆ. ಕೆಲವು ಆಯಾ ಪ್ರದೇಶದ ಜನತೆಯ ಶ್ರದ್ಧಾಭಕ್ತಿಯ ಕೇಂದ್ರಗಳಾಗಿವೆ. ಒಟ್ಟಾರೆ ಜನಸಮುದಾಯದ ಮೇಲೆ ಇವುಗಳ ಪ್ರಭಾವ ಅಪಾರವಾದುದು. ಬೇರೆಬೇರೆ ಕಾಲ ಘಟ್ಟಗಳಲ್ಲಿ ಏನೇ ಸಾಮಾಜಿಕ ಸ್ಥಿತ್ಯಂತರಗಳು ಉಂಟಾದರೂ ಈ ಕೇಂದ್ರಗಳು ಭಕ್ತಸಮುದಾಯದಲ್ಲಿ ತಮ್ಮ ಪ್ರಭಾವವನ್ನು ಅಚ್ಚಳಿಯದೆ ಉಳಿಸಿಕೊಂಡು ಬಂದಿರುವುದು ಅಚ್ಚರಿಯನ್ನೂ ಹಾಗೆಯೇ ಆನಂದವನ್ನೂ ತರುವ ಸಂಗತಿಯಾಗಿದೆ.


ಸುತ್ತೂರಿನ ಗದ್ದುಗೆ